ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ)

ಬಿ.ಎನ್. ರಸ್ತೆ, ಮೈಸೂರು –570025

ನ್ಯಾಕ್‌ನಿಂದ 'ಎ ದರ್ಜೆ ಮಾನ್ಯತೆ ಪಡೆದಿದೆ

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

**☎: 0821-2548236, 2548380** **Fax: 0821-2548238** **e-mail: jssautonomous@gmail.com**

ದಿನಾಂಕ ೨೪.೧೧.೨೦೧೭

## ಪ್ರಕಟಣೆಯ ಕೃಪೆಗಾಗಿ

## ಶಿಕ್ಷಣವು ವೈಜ್ಞಾನಿಕತೆಯಿಂದ ಕೂಡಿರಬೇಕು

**– ಡಾ. ಎಚ್.ಸಿ. ಮಹದೇವಪ್ಪ**

'ಯಾವುದೇ ದೇಶದ ಶಿಕ್ಷಣ ಸಮಾಜದ ಅಭಿವೃದ್ಧಿಗೆ ಪೂರಕವಾದಾಗ ಮಾತ್ರ ಆ ಶಿಕ್ಷಣ ಪ್ರಗತಿಪರವಾದುದು. ಶಿಕ್ಷಣವು ವೈಜ್ಞಾನಿಕತೆಯಿಂದ ಕೂಡಿದಾಗ ಮಾತ್ರ ಅದು ಪ್ರಗತಿಪರವಾಗಲು ಸಾಧ್ಯ' ಎಂದು ಮಾನ್ಯ ಲೋಕೋಪಯೋಗಿ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪನವರು ಹೇಳಿದರು.

ಕರ್ನಾಟಕ ಸರ್ಕಾರದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಮೈಸೂರಿನಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಹಯೋಗದಲ್ಲಿ ಜೆಎಸ್‌ಎಸ್ ಕಾಲೇಜಿನಲ್ಲಿ ಆಯೋಜಿಸಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. 'ಸ್ವಾವಲಂಬನೆಯ ಬದುಕಿಗೆ ವಿಜ್ಞಾನ ಪೂರಕವಾದುದು. ಮೂಢನಂಬಿಕೆಗಳನ್ನು ನಾವು ಮೀರಿ ಬೆಳೆಯಬೇಕು. ವೈಜ್ಞಾನಿಕ ಚಿಂತನೆಗಳನ್ನು ಬೆಳೆಸಿಕೊಳ್ಳಬೇಕು' ಎಂದು ಹೇಳಿದರು.

ದಿವ್ಯಸಾನ್ನಿಧ್ಯವನ್ನು ದಯಪಾಲಿಸಿದ್ದ ಸುತ್ತೂರು ಶ್ರೀ ಮಠದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಆಶೀರ್ವಚನ ನೀಡುತ್ತಾ 'ವಿಸ್ಮಯಗಳು ಪ್ರಕೃತಿಯಲ್ಲಿ ಅನಂತವಾಗಿವೆ. ಆ ವಿಸ್ಮಯಗಳನ್ನೇ ದೇವರು ಎಂದು ತಿಳಿದುಕೊಳ್ಳಲಾಗುತ್ತದೆ ಎಂದು ಐನ್‌ಸ್ಟೀನ್ ಹೇಳುತ್ತಾನೆ. ಪ್ರಕೃತಿಯಲ್ಲಿನ ಎಲ್ಲಾ ಸತ್ಯಗಳನ್ನು ನಾವು ಕಂಡುಕೊಳ್ಳಲಾಗಿಲ್ಲ. ವಿಜ್ಞಾನ ಆ ದಿಸೆಯಲ್ಲಿ ಸದಾ ಶ್ರಮಿಸುತ್ತಿದೆ. ವಿಜ್ಞಾನವು ಸಮಾಜದ ಕಲ್ಯಾಣಕ್ಕೆ ಬಳಕೆಯಾಗಬೇಕು. ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ನಡೆಯುವುದು ಅದರ ಒಂದು ಭಾಗವೇ ಆಗಿದೆ. ಇಂಗ್ಲಿಷಿನಲ್ಲಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಸಂಬಂಧಿತ ಪಾರಿಭಾಷಿಕ ಪದಗಳನ್ನು ಕನ್ನಡವಾಗಿಸಿಕೊಂಡು ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆಯಲಿ' ಎಂದು ಹೇಳಿದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷರಾದ ಪದ್ಮಶ್ರೀ ಡಾ. ಎಸ್.ಕೆ. ಶಿವಕುಮಾರ್ ಅವರು ಆಶಯ ಭಾಷಣ ಮಾಡುತ್ತಾ ಕರ್ನಾಟಕವು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯನ್ನು ಕುರಿತು ವಿವರಿಸಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಕಾಲೇಜಿನ ಪರಿಚಯ ಮಾಡಿಕೊಟ್ಟರು. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಶೇಷ ನಿರ್ದೇಶಕರಾದ ಡಾ. ಹೆಚ್. ಹೊನ್ನೇಗೌಡ ಸ್ವಾಗತಿಸಿದರು. ಕು. ಲಾಸ್ಯ ಮತ್ತು ತಂಡ ಪ್ರಾರ್ಥಿಸಿದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿಯವರು ನಿರೂಪಿಸಿದರು. ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ವಂದಿಸಿದರು.

**ಗೆ,**

**ಸಂಪಾದಕರು** **ಪ್ರಾಂಶುಪಾಲರು**

------------------

___________________